/

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-183 ಚಿಕ್ಕಲ್ಲಸಂದ್ರ, ಬೆಂಗಳೂರು

ಸಂ: ಸಅ/ವಾ-183/ಪಿ.ಆರ್/10/2020-21

ದಿನಾಂಕ : 06-03-2021

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಕ :21-09-2020 ರವರ ಆದೇಶದಂತೆ ದಿನಾಂಕ :06-03-2021 ರಂದು ವಾರ್ಡ್ ಸಂಖ್ಯೆ-183 ಕೆ.ಇ.ಬಿ ಮುಖ್ಯರಸ್ತೆಯಲ್ಲಿರುವ ಯೋಗ ಕೇಂದ್ರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

## ಸಭೆಗೆ ಹಾಜರಾಗಿದ್ದವರ ವಿವರಗಳು

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ ನರಸಿಂಹಶಾಸ್ತ್ರೀ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ | ಹಾಜರಿ |
| 2 | ಶ್ರೀ ಚೇತನ್ ಎಸ್ ಎಸ್ ನಾಯಕ್ | ಸದಸ್ಯ ಕಾರ್ಯದರ್ಶಿ-183 ಮತ್ತು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಪದ್ಮನಾಭನಗರ ಉಪ ವಿಭಾಗ | ಹಾಜರಿ |
| 3 | ಶ್ರೀ ಬಿ.ಶಂಕರಪ್ಪ | ಸಹಾಯಕ ಅಭಿಯಂತರರು, ಬೆಸ್ಕಾಂ ಎಸ್-15 ಉಪ ವಿಭಾಗ. | ಹಾಜರಿ |
| 4 | ಶ್ರೀ ಶ್ರೀಧರ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಹಾಜರಿ |
| 5 | ಶ್ರೀ ಗಂಗಾಧರಸ್ವಾಮಿ | ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ | ಹಾಜರಿ |
| 6 | ಶ್ರೀ ಕೆ.ವೆಂಕಟೇಶ್ | ಕಂದಾಯ ವಸೂಲಿಗಾರರು, ಬಿ.ಬಿ.ಎಂ.ಪಿ. | ಹಾಜರಿ |
| 7 | ಶ್ರೀಮತಿ ಅನಿತಾ | ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ | ಹಾಜರಿ |
| 8 | ಶ್ರೀ ದಿಲೀಪ್‌ಕುಮಾರ್.ಬಿ.ಓ, | ಸಹಾಯಕ ಅಭಿಯಂತರರು, (ತ್ಯಾ.ನೀ.ನಿ.ವಿ.ವ್ಯಾಲಿ) | ಗೈರು ಹಾಜರಿ |
| 9 | ಶ್ರೀ ಸುದರ್ಶನ್, | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಗೈರು ಹಾಜರಿ |
| 10 | ಶ್ರೀ ನಯುವುಲ್ಲಾ ಷರೀಪ್ | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಹಾಜರಿ |
| 11 | ಶ್ರೀಮತಿ ಐಶ್ವರ್ಯ, | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಹಾಜರಿ |
| 12 | ಶ್ರೀಮತಿ ಬಿ.ವಿ.ರೇಖಾ | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಯೋಜನೆ (ದಕ್ಷಿಣ) | ಗೈರು ಹಾಜರಿ |
| 13 | ಶ್ರೀ ಉಮೇಶ್ | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಯೋಜನೆ (ವಿದ್ಯುತ್) | ಗೈರುಹಾಜರಿ |
| 14 | ಶ್ರೀ ಹರೀಶ್ ಹೆಚ್.ಆರ್ | ಅರಣ್ಯ ಇಲಾಖೆ | ಗೈರು ಹಾಜರಿ |
| 15 | ಶ್ರೀ ಲಕ್ಷ್ಮಣ | ತೋಟಗಾರಿಕೆ ಮೇಸ್ತ್ರೀ | ಹಾಜರಿ |

Scanned by CamScanner

| | | | |
|---|---|---|---|
| 16 | ಶ್ರೀಮತಿ ಮಾನಿನಿ | ಸಾರ್ವಜನಿಕರು | ಹಾಜರಿ |
| 16 | ಶ್ರೀ ಶ್ರೀನಿವಾಸ ರೆಡ್ಡಿ | ಸಾರ್ವಜನಿಕರು | ಹಾಜರಿ |
| 17 | ಶ್ರೀ ಹರಿನಾಯ್ಡು | ಸಾರ್ವಜನಿಕರು | ಹಾಜರಿ |
| 18 | ಶ್ರೀ ವೆಂಕಟೇಶ್ | ಸಾರ್ವಜನಿಕರು | ಹಾಜರಿ |

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಪದ್ಮನಾಭನಗರ ಉಪ ವಿಭಾಗ ಹಾಗೂ ವಾರ್ಡ್ ಸಂಖ್ಯೆ-183 ರವರಾದ ಶ್ರೀ ಚೇತನ್ ಎಸ್ ಎಸ್ ನಾಯಕ್ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು, ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಶನ್ ಹಾಗೂ ಸಾರ್ವಜನಿಕರನ್ನು ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು

ನೋಡೆಲ್ ಅಧಿಕಾರಿಗಳ ಜೊತೆಯಲ್ಲಿ ಸಭೆಯನ್ನು ಆಯೋಜಿಸಲಾಗಿದ್ದು, ಪ್ರಥಮವಾಗಿ ಈ ಹಿಂದಿನ ಸಭೆಯ ನಡವಳಿಗಳ ಬಗ್ಗೆ ಚರ್ಚಿಸಿ ಈ ಬಗ್ಗೆ ವಿವಿಧ ಇಲಾಖೆಗಳಿಂದ ಕೈಗೊಂಡ ಕ್ರಮಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಪಾಲಿಕೆ ವತಿಯಿಂದ ವಾರ್ಡ್‌ಗೆ ಕೋವಿಡ್-19 ಲಸಿಕೆ ಬಗ್ಗೆ ಶ್ರೀ ಗಂಗಾಧರಸ್ವಾಮಿ ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ ರವರೊಂದಿಗೆ ಚರ್ಚಿಸಿ ಕೋವಿಡ್-19 ಪಾಸಿಟಿವ್ ಕೇಸ್‌ಗಳು ಹೆಚ್ಚಾಗಿ ಬರುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಟೆಸ್ಟ್‌ಗಳನ್ನು ಮಾಡಲು ಮಾನ್ಯ ಆಯುಕ್ತರವರು ಸೂಚಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು ಹಾಗೂ ಯಾವ ರೀತಿ ಕೋವಿಡ್-19 ರ ಲಸಿಕೆಯನ್ನು ಹಂಚಿಕೆ ಮಾಡಲಾಗುವುದು ಎಂಬ ಬಗ್ಗೆ ಮಾಹಿತಿಯನ್ನು ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಯವರು ಕೇಳಿದರು ಮೊದಲು ಕೋರನಾ ವಾರಿಯರ್ಸ್ ಹಾಗೂ ಬಿ.ಬಿ.ಎಂ.ಪಿ ಪೌರಕಾರ್ಮಿಕ ಸಿಬ್ಬಂದಿಗಳಿಗೆ ಲಸಿಕೆ ನೀಡಲು ಸೂಚಿಸಲಾಯಿತು ಹಾಗೂ ಸಾರ್ವಜನಿಕರಲ್ಲಿ ಲಸಿಕೆಯನ್ನು ಪಡೆಯಲು ಹೆಚ್ಚಿನ ಅರಿವು ಮೂಡಿಸಲು ಹಾಜರಿದ್ದ ಸಾರ್ವಜನಿಕ ಪ್ರಮುಖ ಮುಖಂಡ ಮತ್ತು ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಶನ್ ರವನ್ನು ಕೋರಲಾಯಿತು. ಮುಂದುವರಿದು ಹಾಜರಿದ್ದ ಸಾರ್ವಜನಿಕರಲ್ಲಿ ಎಲ್ಲರೂ ಮುಖಗೌಸ್‌ಗಳನ್ನು ಕಡ್ಡಾಯವಾಗಿ ಧರಿಸಲು ಸೂಚಿಸಬೇಕೆಂದು ಕೋರಿದರು ಮತ್ತು ಮೊದಲನೇ ಆದ್ಯತೆಯನ್ನು ಕೋವಿಡ್-19 ಗೆ ಒತ್ತು ನೀಡುವಂತೆ ಸೂಚಿಸಿರುತ್ತಾರೆ.

ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಯಾವುದೇ ಸಮಸ್ಯೆಗಳು ಇಲ್ಲದ ಕಾರಣ, ಇಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು :-

1. ವಾರ್ಡ್ ಸಂಖ್ಯೆ-183 ರಲ್ಲಿ ಉಧ್ಯಾನವನಗಳಲ್ಲಿ ಕಾಮಗಾರಿಯನ್ನು ಮಾಡಲಾಗುತ್ತಿದ್ದು, ಅದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ವಾಯುವಿಹಾರಕ್ಕೆ ಅನುಕೂಲ ಮಾಡಿಕೊಡಲು ಹಾಗೂ ಉಧ್ಯಾನವನಗಳ ಶೌಚಾಲಯಗಳ ನಿರ್ವಹಣೆಯನ್ನು ಯೋಜನೆ ಇಲಾಖೆಯಿಂದ ನಿರ್ವಹಿಸಲು ಮಾನ್ಯ ಅಧ್ಯಕ್ಷರವರು ಕಾರ್ಯಪಾಲಕ ಅಭಿಯಂತರರು (ಯೋಜನೆ) ದಕ್ಷಿಣ ರವರ ಕಛೇರಿರವರ ಗಮನಕ್ಕೆ ತರಲು ವಾರ್ಡ್ ಸಂಚಾಲಕರಿಗೆ ತಿಳಿಸಲಾಯಿತು.

2) ಇಟ್ಟುಮಡು 3ನೇ ಅಡ್ಡರಸ್ತೆ ಕೆ.ಇ.ಬಿ ಮುಖ್ಯರಸ್ತೆ ಎಸ್.ಡಬ್ಲ್ಯೂ.ಡಿ ಯಿಂದ ಸ್ಟರ್ಲಿಂಗ್ ಅಪಾರ್ಟ್‌ಮೆಂಟ್ ವರಗೆ ಪೈಪ್‌ಲೈನ್ ಅಳವಡಿಸಲು ಸಾರ್ವಜನಿಕರು ಕೋರಿರುವ ಮೇರೆಗೆ 400 ಮಿ.ಮೀಟರ್ ಪೈಪ್‌ಲೈನ್

Scanned by CamScanner

ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ ಎಂದು ವಾರ್ಡ್‌ನ ಸಂಚಾಲಕರು ವಾರ್ಡ್ ಸಮಿತಿ ಸಭೆಗೆ ತಿಳಿಸಿದರು.

3) ಮಾನ್ಯ ಕಂದಾಯ ಸಚಿವರು ಹಾಗೂ ಶಾಸಕರು ಅನುದಾನದಲ್ಲಿ ಚಿಕ್ಕಲ್ಲಸಂದ್ರ ಮುಖ್ಯರಸ್ತೆಯನ್ನು ಸಮದಟ್ಟು ಮಾಡಲು ಅನುದಾನವನ್ನು ಕೋರಿದ್ದು, ಶಾಸಕರ ಅನುದಾನದಲ್ಲಿ ಅನುದಾನವನ್ನು ನೀಡಿರುವುದಾಗಿ ವಾರ್ಡ್ ಸಂಚಾಲಕರು ವಾರ್ಡ್ ಸಮಿತಿ ಸಭೆಗೆ ತಿಳಿಸಿದರು.

4) ಶ್ರೀಮತಿ ಮಾನಿನಿರವರು ಮಾತನಾಡಿ 8ನೇ ಅಡ್ಡರಸ್ತೆ ಗಂಗಮ್ಮ ದೇವಸ್ಥಾನದ ಹತ್ತಿರ ನಿರ್ಮಿಸಿರುವ ದೊಡ್ಡ ಮಳೆ ನೀರು ಚರಂಡಿಗೆ ಸೇತುವೆಯನ್ನು ನಿರ್ಮಿಸಲಾಗಿದ್ದು, ಸೇತುವೆ ನಿರ್ಮಿಸಿರುವ ಉಳಿದಿರುವ ಡೆಬ್ರಿಸ್‌ಗಳನ್ನು ತೆರವುಗೊಳಿಸುವಂತೆ ವಾರ್ಡ್ ಸಮಿತಿ ಸಭೆಯ ಗಮನಕ್ಕೆ ತಂದಾಗ ವಾರ್ಡ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೂಡಲೇ ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು.

5) ಶ್ರೀ ವೆಂಕಟೇಶ್ ರವರು ಮಾತನಾಡಿ ಬೇಸಿಗೆ ಆರಂಭವಾಗಿರುವುದರಿಂದ ಸೊಳ್ಳೆಗಳು ಹೆಚ್ಚಾಗಿದ್ದು, ಸೊಳ್ಳೆಗಳನ್ನು ನಿಯಂತ್ರಿಸಲು ಔಷಧಿ ಸಿಂಪಡಿಸಿಕೊಡುವಂತೆ ವಾರ್ಡ್ ಸಮಿತಿ ಸಭೆಯ ಗಮನಕ್ಕೆ ತಂದಾಗ ಹಿರಿಯ ಆರೋಗ್ಯ ಪರಿವೀಕ್ಷಕರುವರು ಕೂಡಲೇ ಔಷಧಿಯನ್ನು ಸಿಂಪಡಿಸಲು ಕ್ರಮವಹಿಸುವುದಾಗಿ ಮಾನ್ಯ ಅಧ್ಯಕ್ಷರಿಗೆ ತಿಳಿಸಿದರು.

6) ಭುವನೇಶ್ವರಿನಗರದ ಮುಖ್ಯರಸ್ತೆಯಲ್ಲಿ ವಿದ್ಯುತ್ ತಂತಿ ಮೇಲೆ ಇರುವ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಶ್ರೀಮತಿ ಮಾನಿನಿಯವರು ಕೋರಿದಾಗ, ಸಭೆಯಲ್ಲಿದ್ದ ಬೆಸ್ಕಾಂ ಅಧಿಕಾರಿಗಳು ಕೂಡಲೇ ಮರದ ಕೊಂಬೆಗಳನ್ನು ತೆರವುಗೊಳಿಸುವುದಾಗಿ ವಾರ್ಡ್ ಸಮಿತಿ ಸಭೆಗೆ ತಿಳಿಸಿದರು.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿ/ವಾರ್ಡ್ ಸಮಿತಿ ಅಧ್ಯಕ್ಷರು.

ವಾರ್ಡ್ ಸಮಿತಿ ಸಂಚಾಲಕರು

Scanned by CamScanner

## ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಅಧಿಕಾರಿಗಳು :-

| ಕ್ರಮ ಸಂಖ್ಯೆ | ಅಧಿಕಾರಿ ಹೆಸರು | ಹುದ್ದೆ | ಸಹಿ |
|---|---|---|---|
| 1. | B. Shankarappa | JE S15/S/D | [signature] |
| 2. | Aishwarya B.A | AE BWSSB | [signature] |
| 3. | Keerthi. A | JE, S9/U2 | [signature] |
| 4. | R. Anitha | Jr.H.I W/183 | [signature] |
| 5. | [illegible] | [illegible] | [signature] |
| 6. | ಗಂಗಾಧರಸ್ವಾಮಿ | ಹಿ.ಆ.ನಿ. ವಾ/183 | [signature] SHI. 183/W |
| 7. | Rajesh-N-M | AE/S5 S4/BESCOM | [signature] |
| 8 | Sreedhar S. | AE BWSSB. | [signature] |
| 9. | Nayeemulla Sheriff | AEE SW-4 BWSSB | [signature] |
| 10. | K. Venkatesh. | ARO. (PNN) TI | [signature] |
| 11. | Chethan N.S. [illegible] | AEE (PNN) | [signature] |
| 12. | | | |
| 13. | | | |
| 14. | | | |
| 15. | | | |
| 16. | | | |

Scanned by CamScanner

ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಸಾರ್ವಜನಿಕರು :-

| ಕ್ರಮ ಸಂಖ್ಯೆ | ಹೆಸರು | ಸಹಿ |
|---|---|---|
| 1. | MANINI S | [signature] |
| 2. | ವಿ. ವೆಂಕಟೇಶ್ವರ | ವಿ. ವೆಂಕಟೇಶ್ವರ |
| 3. | SRINIVAS REDDY.. K | [signature] |
| 4. | P. HARI | P. [signature] 6/3/21 |
| 5. | | |
| 6. | | |
| 7. | | |
| 8. | | |
| 9. | | |
| 10. | | |
| 11. | | |
| 12. | | |
| 13. | | |
| 14. | | |
| 15. | | |
| 16. | | |
| 17. | | |
| 18. | | |
| 19. | | |
| 20. | | |

Scanned by CamScanner